# ಪಶ್ಚಿಮ ಬಂಗಾಳದಲ್ಲಿ ರಾಮಕೃಷ್ಣ ಮಿಷನ್ನಿನ ಪರಿಹಾರ ಕಾರ್ಯ

**ಪ**ಶ್ಚಿಮ ಬಂಗಾಳ ಮತ್ತು ಅಕ್ಕಪಕ್ಕದ ರಾಜ್ಯಗಳಲ್ಲಿ ಚಂಡ ಮಾರುತದ ಪರಿಣಾಮದಿಂದ ಉಂಟಾದ ಭಾರೀ ಮಳೆಯಿಂದಾಗಿ, ಲಕ್ಷಾಂತರ ಜನ ವಸತಿಹೀನರಾಗಿದ್ದಾರೆ; ಹಲವಾರು ಸಾವುನೋವುಗಳು ಸಂಭವಿಸಿವೆ. ಈ ಪ್ರವಾಹಸಂತ್ರಸ್ತರಿಗೆ ರಾಮಕೃಷ್ಣ ಮಠ ಮತ್ತು ರಾಮಕೃಷ್ಣ ಮಿಷನ್ ಒಡನೆಯೆ ಪರಿಹಾರ ಕಾರ್ಯವನ್ನು ಆರಂಭಿಸಿವೆ. ಈ ಪರಿಹಾರ ಕಾರ್ಯದ ವಿವರ ಹೀಗಿದೆ:

೧. **ಕೊಲ್ಕತ್ತಾದ ನರೇಂದ್ರಪುರದಲ್ಲಿನ** ಕೇಂದ್ರದ ವತಿಯಿಂದ ಸಾವಿರಾರು ಸಂತ್ರಸ್ತರಿಗೆ ೧,೨೦೦ ಕೆ.ಜಿ ಅಕ್ಕಿ, ೨೦೦ ಕೆ.ಜಿ ಬೇಳೆ, ೨೦,೨೦೦ ಕೆ.ಜಿ. ಅವಲಕ್ಕಿ, ೧೦,೨೧೨ ಕೆ.ಜಿ. ಬೆಲ್ಲ, ೧೦೦ ಕೆ.ಜಿ ಹಾಲಿನ ಪುಡಿ, ೨೬ ಕೆ.ಜಿ. ಬಿಸ್ಕೆಟ್, ೮೨,೦೦೦ ಒ.ಆರ್.ಎಸ್ ಪೊಟ್ಟಣಗಳು, ೪,೧೬೦ ಜರ್ಕಿನ್‌ಗಳು, ೮,೦೦,೦೦೦ ಹ್ಯಾಲೋಜನ್ ಗುಳಿಗೆಗಳು, ೬,೫೦೦ ಕೆ.ಜಿ. ಬ್ಲೀಚಿಂಗ್ ಪೌಡರ್, ೨,೬೭೦ ಸೆಟ್ ಹೈಜೀನ್ ಕಿಟ್ಸ್, ೩,೯೮೦ ಟಾರ್ಪಾಲಿನ್‌ಗಳು ಮುಂತಾದ ಸಾಮಗ್ರಿಗಳನ್ನು ದಕ್ಷಿಣ ೨೪ ಪರಗಪಣ ಜಿಲ್ಲೆಯಲ್ಲಿ ವಿತರಿಸಲಾಯಿತು. ಅಲ್ಲದೆ ಕೆಲವು ಸ್ಥಳಗಳಲ್ಲಿ ತಾತ್ಕಾಲಿಕ ಶೌಚಾಲಯಗಳ ವ್ಯವಸ್ಥೆಯನ್ನೂ ಮಾಡಿಕೊಡಲಾಗಿದೆ.

೨. **ಕೊಲ್ಕತಾದ ಬೇಲ್‌ಘರಿಯಾದಲ್ಲಿರುವ ಕೇಂದ್ರವು** ೬೨, ೫೦೦ ಕೆ.ಜಿ ಅವಲಕ್ಕಿ, ೬, ೨೦೦ ಕೆ.ಜಿ. ಸಕ್ಕರೆ, ೨,೪೫,೦೦೦ ಹ್ಯಾಲೋಜನ್ ಗುಳಿಗೆಗಳು, ೧,೨೫೦ ಕೆ.ಜಿ. ಬ್ಲೀಚಿಂಗ್ ಪೌಡರ್, ೬೦೦ ಕೆ.ಜಿ. ಸುಣ್ಣ ಮೊದಲಾದವುಗಳನ್ನು ದಕ್ಷಿಣ ೨೪ ಪರಗಣ ಜಿಲ್ಲೆಯ ೬,೯೮೫ ಕುಟುಂಬಗಳಿಗೆ ಸೇರಿದ ೩೧, ೨೭೩ ಸಂತ್ರಸ್ತರಿಗೆ ವಿತರಿಸಿದೆ.

೩. **ದಕ್ಷಿಣ ೨೪ ಪರಗಣ ಜಿಲ್ಲೆಯ ಮಾನಸಾದ್ವೀಪದಲ್ಲಿರುವ ಕೇಂದ್ರವು** ೬,೦೦೦ ಕೆ.ಜಿ. ಅವಲಕ್ಕಿ, ೧,೫೦೦ ಕೆ.ಜಿ. ಸಕ್ಕರೆ, ೨೫ ಕೆ.ಜಿ. ಹಾಲಿನ ಪುಡಿ, ೪೦ ಕೆ.ಜಿ. ಬಿಸ್ಕೆಟ್, ೫,೦೦೦ ಒ.ಆರ್.ಎಸ್ ಪೊಟ್ಟಣಗಳು, ೫೦,೦೦೦ ಹ್ಯಾಲೋಜನ್ ಗುಳಿಗೆಗಳು – ಇವನ್ನು ಸುಂದರಬನ್ ಪ್ರದೇಶದ ೨೫೨೪ ಕುಟುಂಬಗಳಿಗೆ ಸೇರಿದ ೧೩,೭೬೯ ಸಂತ್ರಸ್ತರಿಗೆ ವಿತರಿಸಿದೆ.

೪. **ಕೊಲ್ಕತಾದ ರಹರಾದಲ್ಲಿರುವ ಕೇಂದ್ರವು** ೬,೦೦೦ ಕೆ.ಜಿ. ಅವಲಕ್ಕಿ, ೧,೦೦೦ ಕೆ.ಜಿ. ಸಕ್ಕರೆ, ೪೪ ಕೆ.ಜಿ. ಹಾಲಿನ ಪುಡಿ, ೭೨ ಕೆ.ಜಿ ಬಿಸ್ಕೆಟ್ಸ್, ೧೪೦೦ ಲೀಟರ್ ಮಿನರಲ್ ನೀರು ಹಾಗೂ ೧,೫೦,೦೦೦ ಹ್ಯಾಲೋಜನ್ ಗುಳಿಗೆಗಳನ್ನು ಉತ್ತರ ೨೪ ಪರಗಣ ಜಿಲ್ಲೆಯ ಸಂದೇಶ್‌ಖಲಿ ಬ್ಲಾಕಿನಲ್ಲಿರುವ ೧೨ ಹಳ್ಳಿಗಳ ೧೬,೪೭೦ ಸಂತ್ರಸ್ತರಿಗೆ ವಿತರಿಸಿದೆ. ಇದಲ್ಲದೆ ೫೭೫ ರೋಗಿಗಳಿಗೆ ವೈದ್ಯಕೀಯ ಪರಿಹಾರವನ್ನೂ ಒದಗಿಸಿದೆ.

೫. **ಉತ್ತರ ೨೪ ಪರಗಣ ಜಿಲ್ಲೆಯ ಸಿಕ್ರಾ–ಕುಲೀನ್ ಗ್ರಾಮದಲ್ಲಿರುವ ಕೇಂದ್ರವು** ಸಾವಿರಾರು ಸಂತ್ರಸ್ತರಿಗೆ ಕಿಚಡಿಯನ್ನು ನೀಡಿದೆ. ಅದಲ್ಲದೆ ೨,೭೫೦ ಕೆ.ಜಿ. ಅವಲಕ್ಕಿ, ೩೧ ಟಿನ್ ಬೆಲ್ಲ, ೧೨೦ ಕೆ.ಜಿ ಬಿಸ್ಕೆಟ್, ೨೫ ಕೆ.ಜಿ. ಹಾಲಿನ ಪುಡಿ, ೨೦,೦೦೦ ಹ್ಯಾಲೋಜನ್ ಗುಳಿಗೆಗಳನ್ನು ೧೩,೦೦೦ ಸಂತ್ರಸ್ತರಿಗೆ ವಿತರಿಸಲಾಗಿದೆ.

೬. **ಕೊಲ್ಕತಾದ ಸ್ವಾಮಿ ವಿವೇಕಾನಂದರ ಜನ್ಮಸ್ಥಳದಲ್ಲಿರುವ ಕೇಂದ್ರವು** ಅವಲಕ್ಕಿ, ಬೆಲ್ಲ, ಅಕ್ಕಿ, ಬೇಳೆ, ಎಣ್ಣೆ, ಬಿಸ್ಕೆಟ್, ಕುಡಿಯುವ ನೀರು ಮತ್ತು ಪ್ಲಾಸ್ಟಿಕ್ ಶೀಟ್‌ಗಳನ್ನು ಉತ್ತರ ೨೪ ಪರಗಣ ಜಿಲ್ಲೆಯ ಸಂದೇಶ್‌ಖಲಿ ಬ್ಲಾಕಿನ ೪ ಹಳ್ಳಿಗಳ ೨೦೦೦ ಸಂತ್ರಸ್ತರಿಗೆ ವಿತರಿಸಿದೆ.

೭. **ಉತ್ತರ ೨೪ ಪರಗಣ ಜಿಲ್ಲೆಯ ಟಾಕಿಯಲ್ಲಿರುವ ಕೇಂದ್ರವು** ಅವಲಕ್ಕಿ, ಬೆಲ್ಲ, ಬಿಸ್ಕೆಟ್, ಹ್ಯಾಲೋಜನ್ ಗುಳಿಗೆಗಳನ್ನು ಸಂದೇಶ್‌ಖಲಿ ಹಾಗೂ ಹಿಂಗಲ್‌ಗಂಜ್ ಬ್ಲಾಕ್‌ಗಳ ಸಾವಿರಾರು ಸಂತ್ರಸ್ತರಿಗೆ ವಿತರಿಸಿದೆ.

೮. **ಬೇಲೂರಿನ ಶಾರದಾಪೀಠ ಕೇಂದ್ರವು** ಸಂದೇಶ್‌ಖಲಿ ಹಾಗೂ ಹಿಂಗಲ್‌ಗಂಜ್ ಬ್ಲಾಕ್‌ಗಳ ಸಂತ್ರಸ್ತರಿಗೆ ಉಚಿತ ವೈದ್ಯಕೀಯ ವ್ಯವಸ್ಥೆಯನ್ನು ನೀಡುತ್ತಿದೆ.

೯. **ಬಾಂಕುರಾದಲ್ಲಿರುವ ಆಶ್ರಮವು** ಬಾಂಕುರಾದ ಆಶ್ರಮ ಪಾರಾ ಬಡಾವಣೆಯ ೧೫ ಕುಟುಂಬಗಳಿಗೆ ಗುಡಿಸಲುಗಳನ್ನು ಕಟ್ಟಿಕೊಳ್ಳಲು ಬಿದಿರು, ಹೆಂಚುಗಳನ್ನು ಒದಗಿಸಿದೆ.

ಈ ಪರಿಹಾರ ಕಾರ್ಯಗಳಿಗೆ ದೇಣಿಗೆ ನೀಡಬಯಸುವವರು ಡಿ.ಡಿ ಅಥವಾ ಚೆಕ್‌ಗಳನ್ನು ಕೊಲ್ಕತಾದಲ್ಲಿ ಸಂದಾಯವಾಗುವ ಹಾಗೆ, 'Ramakrishna Mission' ಹೆಸರಿನಲ್ಲಿ ಕೆಳಗಿನ ವಿಳಾಸಕ್ಕೆ ಕಳುಹಿಸಬೇಕಾಗಿ ಕೋರಿದೆ. ಎಲ್ಲಾ ದೇಣಿಗೆಗಳಿಗೂ ಆದಾಯತೆರಿಗೆ ಅಧಿನಿಯಮ 80-G ಅಡಿಯಲ್ಲಿ ಕರವಿನಾಯಿತಿ ದೊರಕುತ್ತದೆ.

**THE GENERAL SECRETARY**
**Ramakrishna Mission**
**P.O. Belur Math, Dist. Howrah, W. B. 711 202**
**Phone : 2654 1144/ 1180/ 5700/ 5702/ 9681;**
**Fax : 2654 9885**
**E-mail : rkmrelief@gmail.com ;**
**relief@belurmath.org**
**Website : www.belurmath.org /relief**

ಬೇಲೂರು ಮಠ
೦೪. ೦೬. ೨೦೦೯

**ಸ್ವಾಮಿ ಪ್ರಭಾನಂದ**
ಪ್ರಧಾನ ಕಾರ್ಯದರ್ಶಿಗಳು

Managing Editor : Swami Nityasthananda | Editor : Swami Vireshananda
Printed by Sri J. B. Pattabhi and Published by Swami Nityasthananda, on behalf of Sri Ramakrishna Ashrama, Yadavagiri, Mysore and Printed at Pattabi Enterprises, Ramavilasa Road, Mysore and published at Sri Ramakrishna Ashrama, Yadavagiri, Mysore.